ಪೊಲೀಸ್ ವಸತಿ ಗೃಹಗಳು

1160(874); ಶ್ರೀ ಬಣಕಾರ್ ಯು.ಬಿ. (ಹಿರೇಕೆರೂರು)

ಅ) ಪೊಲೀಸ್ ಸಿಬ್ಬಂದಿ ವಸತಿಗೃಹಗಳು ಬಹಳಷ್ಟು ದುರಸ್ತಿ ಹಂತದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಸಿಬ್ಬಂದಿ ವಸತಿಗೃಹ ಮತ್ತು ಹೊಸ ಕಟ್ಟಡ ನಿರ್ಮಾಣ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಇದುವರೆಗೆ ದುರಸ್ತಿ ಮತ್ತು ಹೊಸ ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾದ ಅನುದಾನವೆಷ್ಟು?

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಇಲಾಖೆಯ ಗಮನಕ್ಕೆ ಬಂದಿದೆ.

ಆ) 2013–14ನೇ ಸಾಲಿನಲ್ಲಿ ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ/70/ಪಿಬಿಎಲ್/2013, ದಿನಾಂಕ:22–11–2013 ರಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆತಿರುವ ಮೇರೆಗೆ ಪೊಲೀಸ್ ಗೃಹ 2020 ಯೋಜನೆಯಡಿ 11000 ವಸತಿಗೃಹಗಳನ್ನು 3 ವರ್ಷಗಳ ಅವಧಿಯಲ್ಲಿ ನಿರ್ಮಾಣ ಮಾಡಲು ಯೋಜನೆಯನ್ನು ಹಮ್ಮಿಕೊಳ್ಳಲಾಗಿದ್ದು, ಇದುವರೆಗೆ 2786 ವಸತಿಗೃಹಗಳ ನಿರ್ಮಾಣ ಪ್ರಗತಿಯಲ್ಲಿರುತ್ತದೆ.

ಇ) ಕಳೆದ 3 ವರ್ಷಗಳಲ್ಲಿ ದುರಸ್ತಿ ಮತ್ತು ಕಟ್ಟಡ ನಿರ್ಮಾಣಕ್ಕೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.

ರೂ.ಲಕ್ಷಗಳಲ್ಲಿ

ಕ್ರ. ಸಂ	ಯೋಜನೆ	2012–13	2013–14	2014–15
		ನಿರ್ಮಾಣ		
1	ಆಧುನಿಕಕರಣ	0.00	3400.00	8478.00
2	13ನೇ ಹಣಕಾಸು	3864.00	5200.00	0.00
3	ಆಯವ್ಯಯದಲ್ಲಿ	14207.47	10867.76	20958.75
		ದುರಸ್ತಿ		
4	ದುರಸ್ತಿ/ನವೀಕರಣ	3974.93	6000.00	6307.83

ಪೊಲೀಸ್ ದೂರು ಪ್ರಾಧಿಕಾರ

1161(875); ಶ್ರೀ ಬಣಕಾರ್ ಯು.ಬಿ., (ಹಿರೇಕೆರೂರು)

ಅ) ಜಿಲ್ಲಾ ಪೊಲೀಸ್ ದೂರು ಪ್ರಾಧಿಕಾರ ರಚನೆ ಮಾಡಲು ಸರ್ಕಾರ ನಿರ್ಣಯ ಕೈಗೊಂಡಿದೆಯೇ;

ಆ) ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಈ ದೂರು ಪ್ರಾಧಿಕಾರ ರಚನೆ ಮಾಡಲಾಗಿದೆ;

ಇ) ಹಾಗಿದ್ದಲ್ಲಿ, ಇನ್ನು ರಚನೆ ಮಾಡದೇ ಇರುವ ಜಿಲ್ಲೆಗಳಲ್ಲಿ ಯಾವಾಗ ರಚನೆ ಮಾಡಲಾಗುವುದು;

ಈ) ಹಾಗಿದ್ದಲ್ಲಿ, ರಚನೆ ಆಗಿರುವ ಪ್ರತಿ ಜಿಲ್ಲೆಗಳಲ್ಲಿ ಯಾವ ಕಾರ್ಯ ಮಾಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಶ್ರೀ ಕೆ.ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು)

ಅ) ಹೌದು ಈ ಬಗ್ಗೆ ಸರ್ಕಾರ ಈಗಾಗಲೇ ಕ್ರಮ ಕೈಗೊಂಡಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 150 ಪೊಸಇ 2014, ದಿನಾಂಕ:20–10–2014 ರ ರೀತ್ಯಾ ಜಿಲ್ಲಾ ದೂರು ಪ್ರಾಧಿಕಾರ ರಚಿಸಲಾಗಿರುತ್ತದೆ.